**ಕರ್ನಾಟಕ ಸರ್ಕಾರ**

**ಕೈಮಗ್ಗ ಮತ್ತು ಜವಳಿ ಇಲಾಖೆಯ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇ.20% ರಿಬೇಟ್ ಯೋಜನೆ ಬಗ್ಗೆ ಆದೇಶ ಸಂಖ್ಯೆ: ವಾಕೈ 56 ಜಕೈಯೋ 2016 ದಿನಾಂಕ: 15.03.2017 ರಲ್ಲಿನ ಮಾರ್ಗಸೂಚಿಗಳನ್ನು ಈ ಕೆಳಗಿನಂತೆ ಪರಿಷ್ಕರಿಸಿದೆ.**

**ಆದೇಶ ಸಂಖ್ಯೆ: ವಾಕೈ 56 ಜಕೈಯೋ 2016 ದಿನಾಂಕ: 08.8.2017**

*****

| | | |
|---|---|---|
| 1 | **ಅರ್ಹ ಸಂಸ್ಥೆಗಳು** | 1) ಕೈಮಗ್ಗ ಶಿರೋನಾಮೆಯ ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳು.<br>2) ಪ್ರಾಂತೀಯ ಕೈಮಗ್ಗ ನೇಕಾರರ ಸಹಕಾರ ಸಂಘಗಳು.<br>3) ರಾಜ್ಯ ಮಟ್ಟದ ಕೈಮಗ್ಗ ನೇಕಾರರ ಸಹಕಾರ ಸಂಘಗಳ ಮಹಾಮಂಡಳಗಳು.<br>4) ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ. |
| 2 | **ರಿಬೇಟ್ ಕ್ಲೈಮ್ ಪ್ರಸ್ತಾವನೆ ಸಲ್ಲಿಕೆಯ ವೇಳಾಪಟ್ಟಿ** | 1) ತ್ರೈಮಾಸಿಕ ಅವಧಿ ಮುಕ್ತಾಯವಾದ 10 ದಿನದ ಒಳಗಾಗಿ ಜಿಲ್ಲಾ ಕಛೇರಿಗಳಿಗೆ.<br>2) 10 ದಿನಗಳಲ್ಲಿ ಜಿಲ್ಲಾ ಕಛೇರಿಯಿಂದ ವಲಯ ಕಛೇರಿಗೆ<br>3) 10 ದಿನಗಳಲ್ಲಿ ವಲಯ ಕಛೇರಿಯಿಂದ ಕೇಂದ್ರ ಕಛೇರಿಗೆ<br>4) ತ್ರೈಮಾಸಿಕ ಅವಧಿ ಮುಕ್ತಾಯವಾದ 15 ದಿನಗಳೊಳಗೆ ಕೆಹೆಚ್‌ಡಿಸಿ ಸಂಸ್ಥೆ / ಮಹಾಮಂಡಳದಿಂದ ಕೇಂದ್ರ ಕಛೇರಿಗೆ ಸಲ್ಲಿಸುವುದು. |
| 3 | **ಷರತ್ತು ಮತ್ತು ನಿಬಂಧನೆಗಳು** | 1) ಸರ್ಕಾರವು ನೇಕಾರರ ಅಭ್ಯುದಯಕ್ಕಾಗಿ ಜಾರಿಗೆ ತಂದಿರುವ ಕೆಳಕಂಡ ಯೋಜನೆಗಳನ್ನು ಸಂಘದ ಸದಸ್ಯರಿಗೆ ಕಡ್ಡಾಯವಾಗಿ ಅನುಷ್ಠಾನಗೊಳಿಸಿರಬೇಕು ಹಾಗೂ ಚಾಲ್ತಿಯಲ್ಲಿರಬೇಕು.<br>• ಮಿತವ್ಯಯನಿಧಿ ಯೋಜನೆ (Thirft Fund Scheme)<br>• ಮಹಾತ್ಮ ಗಾಂಧಿ ಬುನಕರ್ ಬೀಮಾ ಯೋಜನೆ (MGBBY)<br>• ಆರೋಗ್ಯ ವಿಮಾ ಯೋಜನೆ – ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ.<br>2) ಅರ್ಹ ಕೈಮಗ್ಗ ಸಹಕಾರ ಸಂಘಗಳ ರಿಬೇಟ್ ಪ್ರಸ್ತಾವನೆಗಳನ್ನು ಮಾತ್ರ ಶಿಫಾರಸ್ಸು ಮಾಡುವುದು.<br>3) ಸಂಘದ ಸದಸ್ಯರುಗಳು ಕಚ್ಚಾಮಾಲನ್ನು ಸಂಘದ ಮೂಲಕ ಪಡೆದು ಸಂಘಕ್ಕೆ ನೀಡಿದ ಪಕ್ಕಾ ಮಾಲಿನ ಮಾರಾಟದ ಮೇಲೆ ಮಾತ್ರ ರಿಬೇಟ್‌ಗೆ ಪರಿಗಣಿಸುವುದು.<br>4) ಸದರಿ ಯೋಜನೆಯಡಿ ನೀಡಲಾಗುವ ರಿಬೇಟ್ ಮರುಪಾವತಿಯನ್ನು ಒಂದು ಬಾರಿಗೆ ಮಾತ್ರ ಪರಿಗಣಿಸುವುದು.<br>5) ರಿಬೇಟ್ ಮಾರಾಟದ ಅವಧಿಯ ಮೊದಲು ಸಂಘದ ದಾಸ್ತಾನು ವಿವರಗಳನ್ನು ಸಿದ್ದಪಡಿಸಿ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳ ಅನುಮೋದನೆ ಪಡೆದು, ರಿಬೇಟ್ ಮಾರಾಟ ಪ್ರಾರಂಭಿಸುವುದು.<br>6) ಪ್ರತಿದಿನ ರಿಬೇಟ್ ಮಾರಾಟದಿಂದ ಬಂದ ಹಣವನ್ನು ಸಂಬಂಧಪಟ್ಟ ಬ್ಯಾಂಕಿಗೆ ಮರುದಿನವೇ ಜಮಾ ಮಾಡತಕ್ಕದ್ದು ಹಾಗೂ ರಿಬೇಟ್ ಅವಧಿಯಲ್ಲಿನ ಬ್ಯಾಂಕ್ ಪಾಸ್ ಪುಸ್ತಕದ ಎಕ್ಸ್‌ಟ್ರಾಕ್ಟ್ ಹಾಗೂ ನಗದು ಪುಸ್ತಕಗಳಿಗೆ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳಿಂದ ದೃಢೀಕರಣ ಪಡೆಯುವುದು. |

...2

7) ರಿಬೇಟ್ ಮಾರಾಟ ಅವಧಿಯಲ್ಲಿ ಮಾರಾಟ ಮಾಡಿದ ಮೊತ್ತದ ಬಿಲ್ಲುಗಳು, ನಗದು ಪುಸ್ತಕ, ಉತ್ಪಾದನೆ ರಿಜಿಸ್ಟರ್, ನೂಲು ಖರೀದಿ ರಿಜಿಸ್ಟರ್ ಮತ್ತು ಸ್ಟಾಕ್ ರಿಜಿಸ್ಟರ್‌ಗಳನ್ನು ಜಿಲ್ಲಾಮಟ್ಟದ ಅಧಿಕಾರಿಗಳು ಪರಿಶೀಲಿಸಿ ದೃಢೀಕರಿಸತಕ್ಕದ್ದು.

8) ಪ್ರತಿ ಬಿಲ್‌ನ ಮೊತ್ತವು ಹತ್ತಿ ಮತ್ತು ಉಣ್ಣೆ ಉತ್ಪನ್ನಗಳಿಗೆ ಗರಿಷ್ಠ ರೂ. 5,000/- ಗಳು ಹಾಗೂ ರೇಷ್ಮೆ ಉತ್ಪನ್ನಗಳಿಗೆ ಗರಿಷ್ಠ ರೂ. 10,000/- ಗಳಿರತಕ್ಕದ್ದು.

9) ಉತ್ಪಾದನಾ ವೆಚ್ಚದಲ್ಲಿ ನೇಕಾರರ ಮಜೂರಿಯು ಕನಿಷ್ಠ 25% ರಿಂದ 30% ಇರತಕ್ಕದ್ದು.

10) ವಿವಿಧ ಸಹಕಾರ ಸಂಘಗಳಲ್ಲಿ ಉತ್ಪಾದನಾ ಮತ್ತು ಮಾರಾಟ ಅವಧಿ ಆಯಾ ಉತ್ಪನ್ನಗಳ ಬೇಡಿಕೆಗೆ ಅನುಗುಣವಾಗಿ ಉತ್ಪಾದನಾ ವ್ಯವಹಾರವು (ಟ್ರಾಂಜ್ಯಾಕ್ಷನ್) ಸಂಘದ ದುಡಿಮೆ ಬಂಡವಾಳಕ್ಕೆ ಅನುಗುಣವಾಗಿರತಕ್ಕದ್ದು.

11) ಮಿತವ್ಯಯ ನಿಧಿಯಲ್ಲಿ ಪಾಲ್ಗೊಂಡ ನೇಕಾರರ ಉತ್ಪಾದನೆಯನ್ನು ಮಾತ್ರ ರಿಬೇಟ್ ಮಾರಾಟಕ್ಕೆ ಪರಿಗಣಿಸತಕ್ಕದ್ದು.

12) ಕೈಮಗ್ಗ ಸಹಕಾರ ಸಂಘಗಳಲ್ಲಿ ಕಾರ್ಯನಿರತವಾಗಿರುವ ಕೈಮಗ್ಗಗಳನ್ನು ವೈಯಕ್ತಿಕವಾಗಿ ಪರಿಶೀಲಿಸಿ ಸಂಘದ ಚಟುವಟಿಕೆಯ ಆಧಾರದ ಮೇಲೆ ಹಾಗೂ ಎಷ್ಟು ಜನ ನೇಕಾರರಿಗೆ ಉದ್ಯೋಗ ಒದಗಿಸಲಾಗಿದೆ ಎಂಬುದರ ಆಧಾರದ ಮೇಲೆ ಉತ್ಪಾದನೆಯನ್ನು ಪರಿಶೀಲಿಸಿ ದೃಢೀಕರಣ ಪತ್ರವನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ನೀಡತಕ್ಕದ್ದು.

13) ಸಂಘಗಳು ದುಡಿಮೆ ಬಂಡವಾಳವನ್ನು NABARD Credit Refinance Scheme / DCCB ಅಲ್ಪಾವಧಿ ಸಾಲ ಅಥವಾ ಇತರೆ ಹಣಕಾಸು ಸಂಸ್ಥೆ / ಬ್ಯಾಂಕುಗಳಿಂದ/ ಜಿಲ್ಲಾವಲಯ / ರಾಜ್ಯ ವಲಯ ಯೋಜನೆಯ ದುಡಿಯುವ ಬಂಡವಾಳ ಸಾಲ ಪಡೆದಂತಹ ಹಾಗೂ ಸಂಘದ ಸದಸ್ಯರ / ಇತರೆ ಮೂಲಗಳ ಖಾಸಗಿ ಠೇವಣಿಗಳು, ಸಂಘದ ಲಾಭಾಂಶ / ಇತರೆ ನಿಧಿಗಳನ್ನು ಸಹ ಸ್ವಂತ ಬಂಡವಾಳವೆಂದು ಪರಿಗಣಿಸುವುದು.

14) ಗ್ರಾಹಕರ ಹೆಸರು ಮತ್ತು ಸಹಿ ಹಾಗೂ ಸೇಲ್ಸ್‌ಮನ್ ಸಹಿ ಮಾರಾಟದ ಬಿಲ್ಲಿನಲ್ಲಿ ಇರತಕ್ಕದ್ದು.

15) ರಿಬೇಟ್ ಮಾರಾಟದ ಅವಧಿಯಲ್ಲಿ ಗ್ರಾಹಕರಿಗೆ ರಿಬೇಟ್ ಹಣವು ತಲುಪಿರುವ / ತಲುಪುತ್ತಿರುವ ಬಗ್ಗೆ ಜಿಲ್ಲಾಮಟ್ಟದ ಅಧಿಕಾರಿಗಳು ಖಚಿತ ಪಡಿಸಿಕೊಳ್ಳತಕ್ಕದ್ದು.

16) ಸಂಘಗಳು ತನ್ನ ನೇಕಾರ ಸದಸ್ಯರಿಗೆ ಉತ್ಪಾದನೆಗೆ ಸಂಬಂಧಿಸಿದಂತೆ ವಿತರಿಸುವ ಮಜೂರಿಯನ್ನು ಬ್ಯಾಂಕ್/ಪೋಸ್ಟ್ ಆಫೀಸ್ ಖಾತೆಯ ಮೂಲಕ ಅಥವಾ ನಗದು ರೂಪದಲ್ಲಿ ಸ್ವೀಕೃತಿ ಪತ್ರ ಪಡೆದು ಪಾವತಿಸಬಹುದು.

4 **ಕಚ್ಚಾಮಾಲು**

1) ಹತ್ತಿ /ರೇಷ್ಮೆ ನೂಲನ್ನು ಕಡ್ಡಾಯವಾಗಿ NHDC, Mill Gate ಅಥವಾ KSMB ಅಥವಾ TIN ನಂಬರ್ ಹೊಂದಿರುವ ಅಧಿಕೃತ Dealer ಗಳ ಮೂಲಕವೇ ಖರೀದಿಸುವುದು.

....3

2) ಬಣ್ಣದ ಮನೆ (ಡೈಯಿಂಗ್ ಹೌಸ್) ಹೊಂದಿದ್ದಲ್ಲಿ, ರಾಸಾಯನಿಕ ವಸ್ತುಗಳು/ಬಣ್ಣಗಳನ್ನು NHDC, Mill Gate ಯೋಜನೆ ಅಥವಾ TIN ಹೊಂದಿರುವ ಬಣ್ಣ/ರಾಸಾಯನಿಕ ಸರಬರಾಜು ಮಾಡುವ ಸಂಸ್ಥೆಗಳಿಂದ ಅವಶ್ಯಕವಾದ ಕಚ್ಚಾಮಾಲು ಖರೀದಿಯನ್ನು ಚೆಕ್/ಡಿಡಿ ಮೂಲಕವೇ ನಿರ್ವಹಿಸುವುದು.

3) ರಿಬೇಟ್ ಇಲ್ಲದ ಅವಧಿಯಲ್ಲಿ (Non-rebate Period) ಸಂಘದ ಮಾರಾಟವನ್ನು ಪರಿಶೀಲಿಸಿ, ಒಟ್ಟಾರೆ ಸಂಘದ ಉತ್ಪಾದನಾ ಮತ್ತು ಮಾರಾಟ ಚಟುವಟಿಕೆಗಳನ್ನು ತುಲನೆ ಮಾಡಿ ಸಂಘದ ಕಾರ್ಯಚಟುವಟಿಕೆಯನ್ನು (ಉತ್ಪಾದನೆ ಮತ್ತು ಮಾರಾಟ ನಿರಂತರವಾಗಿರಬೇಕು) ಹಾಗೂ ರಿಬೇಟ್ ಅವಧಿಯ ಉತ್ಪಾದನಾ ಮತ್ತು ಮಾರಾಟವನ್ನು ಪರಾಮರ್ಶಿಸಿ ತೀರ್ಮಾನಿಸುವುದು.

**5 ಸಂಘದ ಆಡಳಿತ ವಿಷಯ**

1) ಈ ಯೋಜನೆಯಡಿ ಪ್ರಯೋಜನ ಪಡೆಯಲು ಸಂಘಗಳು ಪ್ರಸಕ್ತ ಮತ್ತು ತಕ್ಷಣದ ಹಿಂದಿನ ಸಾಲನ್ನು ಹೊರತುಪಡಿಸಿ ಕಳೆದ ವರ್ಷದ ಲೆಕ್ಕಪರಿಶೋಧನೆ ಮಾಡಿಸಿರತಕ್ಕದ್ದು.

(ಉದಾಹರಣೆ: 2017-18ನೇ ಸಾಲಿನ ರಿಬೇಟ್ ಪ್ರಸ್ತಾವನೆಗೆ 2015-16ನೇ ಸಾಲಿನ ಲೆಕ್ಕಪರಿಶೋಧನೆಯಾಗಿರಬೇಕು)

2) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಪ್ರಕಾರ ಬೈಲಾ ತಿದ್ದುಪಡಿ, ಸರ್ವ ಸದಸ್ಯರ ಸಭೆ, ಆಡಳಿತ ಮಂಡಳಿಯ ಸಭೆಗಳು ಹಾಗೂ ಇತರೆ ಶಾಸನಬದ್ಧ ನಡವಳಿಗಳನ್ನು ಪೂರೈಸಿರಬೇಕು.

**6 ದಾಖಲಾತಿಗಳು**

1) ಆಯಾ ರಿಬೇಟ್ ಅವಧಿಯ ಮಾರಾಟಕ್ಕೆ ಸಂಘಗಳು ಉಪಯೋಗಿಸಿರುವ ಮೊದಲನೇ ಮತ್ತು ಕೊನೆಯ ಬಿಲ್ಲುಗಳನ್ನು ಇಲಾಖಾ ತನಿಖಾಧಿಕಾರಿಯಿಂದ ದೃಢೀಕರಿಸಿ ಪ್ರತಿ ಸಲ್ಲಿಸತಕ್ಕದ್ದು.

2) ಇಲಾಖೆಯ ನಿಗದಿತ Proforma I & II ರಲ್ಲಿ ಪೂರ್ಣ ಮಾಹಿತಿ ಸಲ್ಲಿಸುವುದು.

3) ಇಲಾಖೆಯು ನಿಗದಿಪಡಿಸಿರುವ ಅನೆಕ್ಷರ್ 'ಬಿ' ಯನ್ನು ದ್ವಿಪ್ರತಿಯಲ್ಲಿ ಮತ್ತು ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಏಕ ಪ್ರತಿಯಲ್ಲಿ ಸಲ್ಲಿಸುವುದು.

4) ಪ್ರಸ್ತಾವನೆ ಅವಧಿಯ ಹಿಂದಿನ ಮಾಸಾಂತ್ಯದವರೆಗೆ, ಹಿಂದಿನ ಮತ್ತು ಪ್ರಸಕ್ತ ವರ್ಷದ ತಿಂಗಳುವಾರು ಉತ್ಪಾದನೆ ಮತ್ತು ಮಾರಾಟದ ವಿವರಗಳನ್ನು ಅನುಬಂಧ 'ಡಿ ಹಾಗೂ ಡಿ-1 ರಲ್ಲಿ ನಮೂದಿಸಿ ತನಿಖಾಧಿಕಾರಿಯವರಿಂದ ದೃಢೀಕರಿಸುವುದು.

5) ಸಂಘದ ಉತ್ಪಾದನಾ ಚಟುವಟಿಕೆಗಳಿಗೆ ಪಡೆದ ಆರ್ಥಿಕ ಸೌಲಭ್ಯದ ವಿವರ, ಆರ್ಥಿಕ ಸಂಸ್ಥೆ/ಬ್ಯಾಂಕ್‌ಗಳ ಹೆಸರು ಮತ್ತು ಪಡೆದ ದುಡಿಮೆ ಬಂಡವಾಳದ ವಿವರ, ಹಾಗೂ ಇಲಾಖೆಯಿಂದ ಪಡೆದ ದುಡಿಮೆ ಬಂಡವಾಳ ಸಾಲ ಮತ್ತು ಸ್ವಂತ ಬಂಡವಾಳ ಹೊಂದಿರುವ ಬಗ್ಗೆ ದೃಢೀಕೃತ ಪೂರಕ ದಾಖಲೆಗಳನ್ನು ಸಲ್ಲಿಸುವುದು.

6) ಸಂಘವು ಉತ್ಪಾದನೆಗೆ ಅವಶ್ಯಕ ಕಚ್ಚಾಮಾಲನ್ನು ಖರೀದಿಸಿದ ವಿವರ, ಕಚ್ಚಾಮಾಲು ಸರಬರಾಜು ಮಾಡಿದ ಏಜೆನ್ಸಿ, ಖರೀದಿಗೆ ಪಾವತಿ ಮಾಡಿದ ಹಣದ ವಿಧಾನ (ಚೆಕ್/ಡಿಡಿ) ಮತ್ತು ಮಿಲ್‌ಗೇಟ್ ಪ್ರೈಸ್ ಯೋಜನೆಯಡಿ ಎನ್.ಹೆಚ್.ಡಿ.ಸಿ ಯಿಂದ ಕಚ್ಚಾಮಾಲು ಖರೀದಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಯು ಪರಿಶೀಲಿಸಿ ದೃಢೀಕರಿಸಿ ದಾಖಲೆಗಳೊಂದಿಗೆ ಸಲ್ಲಿಸುವುದು.

7) ಅನೆಕ್ಷರ್ 'ಬಿ' ನಲ್ಲಿ ಎಲ್ಲಾ ಪುಟಗಳಿಗೆ ಚಾರ್ಟರ್ಡ್ ಅಕೌಂಟೆಂಟ್ (ಸಿ.ಎ.) ರವರ ಸಹಿ ಮತ್ತು ಮೊಹರು ಪಡೆದ, ಜಿಲ್ಲೆಯ ಕ್ರೋಢಿಕೃತ ಮಾಹಿತಿಯನ್ನು ಅನೆಕ್ಷರ್ ಸಿ ನಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ದೃಢೀಕರಣದೊಂದಿಗೆ ಸಲ್ಲಿಸುವುದು.

...4

೮) ದೃಢೀಕರಣ ಪತ್ರ-1 ರಿಂದ ೮ ರಲ್ಲಿ ವಿವರಗಳ ಸ್ಪಷ್ಟ ನಮೂದು ಇರತಕ್ಕದ್ದು.

- ರಿಬೇಟ್ ಅವಧಿಯಲ್ಲಿನ ಮಾರಾಟದ ಹಣ ಬ್ಯಾಂಕಿಗೆ ತುಂಬಿದ ಬಗ್ಗೆ ಚಲನ್ ಪ್ರತಿ / ಬ್ಯಾಂಕ್ ಪಾಸ್ ಪುಸ್ತಕದ ಎಕ್ಸ್‌ಟ್ರಾಕ್ಟ್.
- ದೃಢೀಕರಿಸಿರುವ ರಿಬೇಟ್ ಅವಧಿಯ ನಗದು ಪುಸ್ತಕ, ಉತ್ಪಾದನೆ ರಿಜಿಸ್ಟರ್, ನೂಲು ಖರೀದಿ ರಿಜಿಸ್ಟರ್, ಸ್ಟಾಕ್ ರಿಜಿಸ್ಟರ್ ಮತ್ತು ಯೋಜನೆಯ ಮಾರ್ಗಸೂಚಿಗಳನ್ನು ಪಾಲಿಸಲಾಗಿದೆ ಎಂಬ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ದೃಢೀಕರಣ.
- ಎಂ.ಜಿ.ಬಿ.ಬಿ.ವೈ ಮತ್ತು ಆರ್.ಎಸ್.ಬಿ.ವೈ ಯೋಜನೆಯಡಿ ಅಳವಡಿಸಿದ ನೇಕಾರರ ಸಂಖ್ಯೆ, ಸಂಘದಲ್ಲಿ ಕಾರ್ಯ ನಿರತವಾಗಿರುವ ಮಗ್ಗಗಳು ಮತ್ತು ಎಷ್ಟು ಜನರಿಗೆ ಉದ್ಯೋಗ ಒದಗಿಸಲಾಗಿದೆ ಎಂಬ ಬಗ್ಗೆ ದೃಢೀಕರಣ.
- ರಿಬೇಟ್ ಅವಧಿಯ ಪ್ರಾರಂಭಕ್ಕೆ ಇದ್ದ ಪಕ್ಕಾ ಮಾಲು ದಾಸ್ತಾನನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಪರಿಶೀಲಿಸಿದ ಬಗ್ಗೆ ದೃಢೀಕರಣ.
- ಜಿಲ್ಲಾ ಮಟ್ಟದ ಅಧಿಕಾರಿಗಳು ಕೈಮಗ್ಗ ಉತ್ಪನ್ನಗಳ ರಿಬೇಟ್ ಮಾರಾಟದ ಬಗ್ಗೆ ಗ್ರಾಹಕರ ಮಟ್ಟದಲ್ಲಿ ಶೇಕಡ 10 ರಷ್ಟು ಪರಿಶೀಲಿಸಿದ ಬಗ್ಗೆ ದೃಢೀಕರಣ.
- ಕಚ್ಚಾಮಾಲು ಖರೀದಿ ಬಗ್ಗೆ ಮಾಹಿತಿ.
- ದುಡಿಮೆ ಬಂಡವಾಳ ವ್ಯವಸ್ಥೆ ಬಗ್ಗೆ ಮಾಹಿತಿ
- ಸಂಘವು ಮಿತವ್ಯಯ ನಿಧಿ ಯೋಜನೆಯನ್ನು ಅನುಷ್ಠಾನಗೊಳಸುತ್ತಿರುವ ಬಗ್ಗೆ ಮಾಹಿತಿ ತಃಖ್ತೆ.
- ದೃಢೀಕರಣ ಪತ್ರಗಳಿಗೆ ಪೂರಕವಾದ ದಾಖಲೆಗಳನ್ನು ಒದಗಿಸತಕ್ಕದ್ದು.
- ಜಿಲ್ಲಾಮಟ್ಟದ ಅಧಿಕಾರಿಗಳು ಎಲ್ಲಾ ದಾಖಲೆಗಳಿಗೆ "ಪರಿಶೀಲಿಸಿ ದೃಢೀಕರಿಸಿದೆ" ಎಂಬುದಾಗಿ ತಮ್ಮ ಸಹಿ ಮತ್ತು ಮೊಹರಿನೊಂದಿಗೆ ದೃಢೀಕರಿಸತಕ್ಕದ್ದು.
- ಕೈಮಗ್ಗ ನೇಕಾರರ ಸಹಕಾರ ಸಂಘಗಳು ರಿಬೇಟ್ ನೀಡಿರುವ ಬಗ್ಗೆ ಖಚಿತಪಡಿಸಿದ ದಾಖಲೆಗಳನ್ನು ಒದಗಿಸತಕ್ಕದ್ದು.
- ಮಾರಾಟದ ಬಿಲ್ಲುಗಳು ಹಾಗೂ ರಿಜಿಸ್ಟರ್‌ಗಳನ್ನು ""ಪರಿಶೀಲಿಸಿ ದೃಢೀಕರಿಸಿದೆ" ಎಂಬುದಾಗಿ ನಮೂದಿಸಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಡಿ.ಎಸ್. ಜೋಗೋಜೆ)**
(ಸರ್ಕಾರದ ಉಪಕಾರ್ಯದರ್ಶಿ(ಜವಳ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, (ಎ ಮತ್ತು ಇ) ಜಿ.ಅಂಡ್ ಎಸ್.ಎ., ಕರ್ನಾಟಕ, ಆಡಿಟ್ ಭವನ, ಬೆಂಗಳೂರು.
2. ಜವಳ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳ ಇಲಾಖೆ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1).
5. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಜವಳ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.